# India-UK Virtual Summit (May 04, 2021)

May 02, 2021

**ಭಾರತ- ಯುನೈಟೆಡ್ ಕಿಂಗ್‌ಡಮ್ ವರ್ಚುಯಲ್ ಸಭೆ (ಮೇ 04, 2021)**

ಮೇ 02, 2021

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು 4 ಮೇ 2021 ರಂದು ಯುನೈಟೆಡ್ ಕಿಂಗ್‌ಡಮ್ನ ಪ್ರಧಾನ ಮಂತ್ರಿ ಗೌರವಾನ್ವಿತ ಬೋರಿಸ್ ಜಾನ್ಸನ್ ರವರೊಂದಿಗೆ ವರ್ಚುಯಲ್ ಸಭೆ ನಡೆಸಲಿದ್ದಾರೆ.

2. ಭಾರತ ಮತ್ತು ಯುನೈಟೆಡ್ ಕಿಂಗ್‌ಡಮ್ 2004 ರಿಂದ ಕಾರ್ಯತಂತ್ರದ ಸಹಭಾಗಿತ್ವವನ್ನು ಹೊಂದಿವೆ. ಇದನ್ನು ನಿಯಮಿತವಾಗಿ ಉನ್ನತ ಮಟ್ಟದ ವಿನಿಮಯ ಹಾಗೂ ವೈವಿಧ್ಯಮಯ ಪ್ರದೇಶಗಳಲ್ಲಿ ಬೆಳೆಯುತ್ತಿರುವ ಒಮ್ಮುಖಗಳಿಂದ ಗುರುತಿಸಲಾಗಿದೆ. ನಮ್ಮ ಬಹುಮುಖಿ ಕಾರ್ಯತಂತ್ರದ ಸಂಬಂಧಗಳನ್ನು ಹೆಚ್ಚಿಸಲು ಮತ್ತು ಪರಸ್ಪರ ಆಸಕ್ತಿಯ ಪ್ರಾದೇಶಿಕ ಹಾಗೂ ಜಾಗತಿಕ ವಿಷಯಗಳ ಬಗ್ಗೆ ಸಹಕಾರವನ್ನು ಹೆಚ್ಚಿಸಲು ಸಭೆಯು ಒಂದು ಪ್ರಮುಖ ಅವಕಾಶವಾಗಿದೆ. ಎರಡೂ ನಾಯಕರು ಕೋವಿಡ್ 19 ಸಹಕಾರ ಮತ್ತು ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡುವ ಜಾಗತಿಕ ಪ್ರಯತ್ನಗಳ ಬಗ್ಗೆ ಸಹ ಚರ್ಚಿಸಲಿದ್ದಾರೆ.

3. ಸಭೆಯಲ್ಲಿ ಸಮಗ್ರ ಮಾರ್ಗಸೂಚಿ 2030 ಅನ್ನು ಪ್ರಾರಂಭಿಸಲಾಗುವುದು, ಇದು ಮುಂದಿನ ದಶಕದಲ್ಲಿ ಭಾರತ–ಯುನೈಟೆಡ್ ಕಿಂಗ್‌ಡಮ್ ಸಹಕಾರವನ್ನು ಐದು ಪ್ರಮುಖ ಕ್ಷೇತ್ರಗಳಲ್ಲಿ, ಅಂದರೆ ಜನರಿಂದ–ಜನರ ಸಂಬಂಧ, ವ್ಯಾಪಾರ ಹಾಗೂ ಸಮೃದ್ಧಿ, ರಕ್ಷಣಾ ಮತ್ತು ಸುರಕ್ಷತೆ, ಹವಾಮಾನ ಕ್ರಮ ಮತ್ತು ಆರೋಗ್ಯ ರಕ್ಷಣೆಯನ್ನು ಮತ್ತಷ್ಟು ವಿಸ್ತರಿಸಲು ಮತ್ತು ಆಳಗೊಳಿಸಲು ದಾರಿ ಮಾಡಿಕೊಡುತ್ತದೆ.

**ನವ ದೆಹಲಿ**
**ಮೇ 02, 2021**

DISCLAIMER: This is an approximate translation. The original is available in English on MEA’s website and may be referred to as the official press release.